ದಿನಾಂಕ 23-10-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 4 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ವಿ ಎಮ್ ಪಿ ವಕೀಲರಿಂದ.

ಬಿ ಕೆ ಹಳ್ಳಿ ಹಳಿಯಾಳ ತಾಲೂಕಿನಲ್ಲಿ ಒಂದು ಸಣ್ಣ ಹಳ್ಳಿ ಎಂದರೆ ಸರಿ. ಆ ಹಳ್ಳಿಯಲ್ಲಿ ಸಾಮಾನ್ಯವಾಗಿ ಎಲ್ಲಾ ಕುಟುಂಬಗಳು ರೈತಾಪಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆ ಊರಿನ ಜನರ ಆದಾಯದ ಮುಖ್ಯ ಮೂಲ ಕೃಷಿ ಎಂದರೆ ಸರಿ. ಕೃಷಿಯೊಂದಿಗೆ ಹಾಲು ಮಾರಾಟ ಸಹ ಮಾಡುತ್ತಾರೆ ಎಂದರೆ ಸರಿ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರು ಬಿ ಕೆ ಹಳ್ಳಿಯಲ್ಲಿ ಇದ್ದರು ಎಂದರೆ ಸರಿ. ನಾನು ಸಣ್ಣವನಿದ್ದಾಗ ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರು ಬಿ ಕೆ ಹಳ್ಳಿಯಲ್ಲಿ ಇರುವುದನ್ನು ನೋಡಿದ್ದೇನೆ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರು ಬಿ ಕೆ ಹಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದರು ಎಂದರೆ ಸಾಕ್ಷಿ ಅವರು ಧಾರವಾಡದಲ್ಲಿ ಹುಟ್ಟಿದ್ದು, ಅವರಿಗೆ 20 ವರ್ಷಗಳ ನಂತರ ಬಿ ಕೆ ಹಳ್ಳಿಗೆ ಬಂದಿದ್ದಾರೆ ಎನ್ನುತ್ತಾರೆ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರು ಬಿ ಕೆ ಹಳ್ಳಿಯಲ್ಲಿ ಅವರು ತಮ್ಮ ಕುಟುಂಬದೊಂದಿಗೆ ವಾಸವಿದ್ದರು ಎಂದರೆ ಸರಿ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರು ರೈತಾಪಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವರು ಬಿ ಕೆ ಹಳ್ಳಿಯಲ್ಲಿ ಏನು ಮಾಡುತ್ತಿದ್ದರು

ಎಂದರೆ ಸಾಕ್ಷಿ ಅಂಗಡಿ ಇಟ್ಟಿದ್ದರು ಎನ್ನುತ್ತಾರೆ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರು ಬಿ ಕೆ ಹಳ್ಳಿಯಲ್ಲಿ ಏನು ಮಾಡುತ್ತಿದ್ದರು ಎಂದರೆ ಸಾಕ್ಷಿ ಅಂಗಡಿ ಇಟ್ಟಿದ್ದರು ಎನ್ನುವುದಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದರೆ ಸರಿ. ಅವರ ಇಬ್ಬರು ಹೆಣ್ಣು ಮಕ್ಕಳು ಪ್ರತಿವಾದಿ 4 ಮತ್ತು 5 ರವರು ಎಂದರೆ ಸರಿ. ಅವರ ಮಗನ ಹೆಸರು ಮಂಜು ಎಂದರೆ ಸರಿ. ಪ್ರತಿವಾದಿ 4 ಮತ್ತು 5 ರವರು ತಮ್ಮ ಶಿಕ್ಷಣವನ್ನು ಬಿ ಕೆ ಹಳ್ಳಿಯಲ್ಲಿ ಓದಿದ್ದಾರೆ ಎಂದರೆ ಸರಿ. ಪ್ರತಿವಾದಿ 4 ಮತ್ತು 5 ರವರು ತಮ್ಮ ಹೈಸ್ಕೂಲ್ ಶಿಕ್ಷಣವನ್ನು ಹಳಿಯಾಳದಲ್ಲಿ ಮುಗಿಸಿದ್ದು, ಬಿ ಕೆ ಹಳ್ಳಿಯಿಂದ ಹಳಿಯಾಳಕ್ಕೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿ. ಪ್ರತಿವಾದಿ 4 ಮತ್ತು 5 ರವರ ಮದುವೆ ಬಿ ಕೆ ಹಳ್ಳಿಯಲ್ಲಿ ಆಗಿದೆ ಎಂದರೆ ಸರಿ.

ಪ್ರಸ್ತುತ ನಾನು ರೈತಾಪಿ ಕೆಲಸ ಮಾಡುತ್ತೇನೆ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿರುವ ನಿಮಗೆ ಸೇರಿದ ಸ್ವತ್ತುಗಳ ಸರ್ವೇ ನಂಬರ ಎಷ್ಟು ಎಂದರೆ ಸಾಕ್ಷಿ ಸರ್ವೇ ನಂಬರ 44/4 ಅದರಲ್ಲಿರುವ 7 ಎಕರೆ 13 ಗುಂಟೆ ಜಮೀನು ಇದೆ ಎನ್ನುತ್ತಾರೆ. ಅದರಲ್ಲಿನ ಸ್ವಲ್ಪ ಜಮೀನನ್ನು ಮಾರಾಟ ಮಾಡಿದ್ದೇನೆ. ಸದರಿ ಸ್ವತ್ತನ್ನು ಹೊರತುಪಡಿಸಿ ಬೇರೆ ಜಮೀನುಗಳು ನನಗೆ ಇಲ್ಲ. ಸರ್ವೇ ನಂಬರ 44/4 ನನ್ನ ತಂದೆಯ ಹೆಸರಿನಲ್ಲಿ ಇದೆ ಎನ್ನುತ್ತಾರೆ. ದಾವಾ ಸ್ವತ್ತಿನ ಸರ್ವೇ ನಂಬರ ಮತ್ತು ನಿಮ್ಮ ಜಮೀನಿನ ಸರ್ವೇ ನಂಬರ ಬೇರೆ ಬೇರೆ ಎಂದರೆ ಸರಿ. ಸರ್ವೇ ನಂಬರ 25, 38 ಮತ್ತು 39 ರ ಜಮೀನುಗಳು ಯಾರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ನನ್ನ ತಂದೆಯ ತಂದೆ ಅಂದರೆ ನನ್ನ ಅಜ್ಜನಾದ ದೇವಿಸಿಂಗ್ ಲಕ್ಷ್ಮಣಸಿಂಗ್

ರಜಪೂತ ರವರ ಹೆಸರಿನಲ್ಲಿ ಇವೆ ಎನ್ನುತ್ತಾರೆ. ಸರ್ವೇ ನಂಬರ 25, 38 ಮತ್ತು 39 ರಲ್ಲಿ 15 ಎಕರೆ 17 ಗುಂಟೆ ಇದೆ ಎಂದರೆ ಸಾಕ್ಷಿ 17 ಎಕರೆಗಿಂತ ಹೆಚ್ಚು ಇದೆ ಎನ್ನುತ್ತಾರೆ. ಸರ್ವೇ ನಂಬರ 25, 38 ಮತ್ತು 39 ಗಳನ್ನು ನನ್ನ ಅಜ್ಜ ಉಳುಮೆ ಮಾಡುತ್ತಿದ್ದ ಎಂದರೆ ಸರಿ. ಸದರಿ ಸ್ವತ್ತುಗಳು ಬಿ ಕೆ ಹಳ್ಳಿಯಲ್ಲಿ ಇವೆ ಎಂದರೆ ಸರಿ. ನಿಪಿ 4 ಸರ್ವೇ ನಂಬರ 40 ಕುರಿತು ಇದೆ ಎಂದರೆ ಸರಿ.

ಸರ್ವೇ ನಂಬರ 44/2 ಒಂದು ಒಗ್ಗೂಡಿದ ಭೂಮಿ ಇಲ್ಲ ಅದರಲ್ಲಿ ವಿಭಾಗಗಳು ಆಗಿವೆ ಎಂದರೆ ಸರಿ. ಸರ್ವೇ ನಂಬರ 44/2 ಅ ಮತ್ತು ಸರ್ವೇ ನಂಬರ 44/2 ಕ ಗಳು ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ಅಲಿಯಾಸ ಠಾಕೂರ್ ರವರ ಹೆಸರಿನಲ್ಲಿ ಇದೆ ಅವರೆ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಪ್ರಸ್ತುತ ಸರ್ವೇ ನಂಬರ 44/2 ಅ ಮತ್ತು ಸರ್ವೇ ನಂಬರ 44/2 ಕ ಗಳು ಪ್ರತಿವಾದಿ 1 ರಿಂದ 3 ರವರ ಹೆಸರಿನಲ್ಲಿ ಇವೆ ಎಂದರೆ ಸರಿ. ಸರ್ವೇ ನಂಬರ 44/2 ಅ ಮತ್ತು ಸರ್ವೇ ನಂಬರ 44/2 ಕ ಗಳ ಬಗ್ಗೆ ಪ್ರತಿವಾದಿ 4 ಮತ್ತು 5 ರವರು ಇದೇ ನ್ಯಾಯಾಲಯದಲ್ಲಿ ಪ್ರತಿವಾದಿ 1 ರಿಂದ 3 ರವರ ವಿರುದ್ಧ ಅಸಲು ದಾವೆ ಸಂಖ್ಯೆ 41/2017 ಅನ್ನು ಪಾಲುವಾಟ್ನೆ ಗಾಗಿ ಹೂಡಿದ್ದರು, ಅದು ಡಿಕ್ರಿಯಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ಡಿಕ್ರಿಯ ವಿರುದ್ಧ ಸಲ್ಲಿಸಿದ ಮೇಲ್ಮನವಿ ವಜಾ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೇ ನಂಬರ 44/2 ಅ ಮತ್ತು ಸರ್ವೇ ನಂಬರ 44/2 ಕ ಗಳ ಮಾಲೀಕರು ಪ್ರತಿವಾದಿ 1 ರಿಂದ 5 ರವರು ಎಂದರೆ ಸಾಕ್ಷಿ ಉತಾರದಲ್ಲಿ ಪ್ರತಿವಾದಿ 1 ರಿಂದ 3 ರವರ ಹೆಸರು ಮಾತ್ರ ಮಾಲೀಕರು ಎಂದು ಇದೆ, ಅವರನ್ನು ಮಾತ್ರ ಮಾಲೀಕರು ಎನ್ನುತ್ತೇವೆ.

ದಾವಾ ಜಮೀನನ್ನು ಯಾವ ದಿನಾಂಕದಿಂದ ನೀವು ಉಳುಮೆ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ 1938 ರಿಂದ 1948 ರ ವರೆಗೆ ನನ್ನ ಅಜ್ಜ ದೇವಿಸಿಂಗ್ ರಜಪೂತ್ ರವರು ಉಳುಮೆ ಮಾಡುತ್ತಿದ್ದರು, ನಿಖರವಾಗಿದ ದಿನಾಂಕ ಹೇಳಲಾಗುವುದಿಲ್ಲ ಎನ್ನುತ್ತಾರೆ. 1938 ರಿಂದ 1948 ರ ವರೆಗೆ ನನ್ನ ಅಜ್ಜ ದೇವಿಸಿಂಗ್ ರಜಪೂತ್ ರವರು ಉಳುಮೆ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆಗಳು ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. 1938 ರಿಂದ 1948 ರ ವರೆಗೆ ನನ್ನ ಅಜ್ಜ ದೇವಿಸಿಂಗ್ ರಜಪೂತ್ ರವರು ಉಳುಮೆ ಮಾಡುತ್ತಿದ್ದರು, ಪ್ರತಿವಾದಿಯರು ಸದರಿ ಜಮೀನಿಗೆ ಸಂಬಂಧವಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸರ್ವೇ ನಂಬರ 44/2 ಅ ಮತ್ತು ಸರ್ವೇ ನಂಬರ 44/2 ಕ ಗಳನ್ನು ಯಾವತ್ತು ನೀವು ಅಥವಾ ನಿಮ್ಮ ಪೂರ್ವಜರು ಉಳುಮೆ ಮಾಡಿಲ್ಲ ಎಂದರೆ ಸರಿಯಲ್ಲ, ನಾವೇ ಉಳುಮೆ ಮಾಡುತ್ತಿದ್ದೇವೆ ಎನ್ನುತ್ತಾರೆ. ನೀವು ಮತ್ತು ಪ್ರತಿವಾದಿ 1 ರಿಂದ 3 ರವರು ಶಾಮೀಲಾಗಿ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳಿಗೆ ತೆರಿಗೆ ಪಾವತಿಸಿದ ರಸೀದಿಗಳು ನಿಮ್ಮ ಬಳಿ ಇವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಜಮೀನುಗಳು ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ, ನನ್ನ ಅಜ್ಜ ದೇವಿಸಿಂಗ್ ರಜಪೂತ್ ರವರಿಗೆ ಸೇರಿದ್ದವು ಎನ್ನುತ್ತಾರೆ. ಪ್ರತಿವಾದಿ 4 ಮತ್ತು 5 ರವರಿಗೆ ತೊಂದರೆ ನೀಡುವ ಉದ್ದೇಶದಿಂದ ಮತ್ತು ದಾವಾ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ಈ ದಾವೆ ಹೂಡುವ ಮೊದಲು ತಹಶೀಲ್ದಾರ ಕಚೇರಿಯಲ್ಲಿ ಅರ್ಜಿ ಸಲ್ಲಿಸಿ ದಾವಾ ಜಮೀನನ್ನು ಪಡೆಯಲು ಪ್ರಯತ್ನಿಸಿದ್ದೀರಿ ಎಂದರೆ

ಸರಿಯಲ್ಲ. ನಾನು ತಹಶೀಲ್ದಾರ ಕಚೇರಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲ. ನೀವು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಲು ಪ್ರಯತ್ನಿಸಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ.

ಬಿ ಕೆ ಹಳ್ಳಿಯಲ್ಲಿ ಪ್ರತಿವಾದಿ 4 ಮತ್ತು 5 ರವರ ತಂದೆಯ ಮನೆ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಆ ಮನೆ ನನ್ನ ಅಜ್ಜಿ ಕಮಲಾಬಾಯಿ ದೇವಿಸಿಂಗ್ ರಜಪೂತ್ ರವರಿಗೆ ಸೇರಿದ್ದು ಎನ್ನುತ್ತಾರೆ. ಪ್ರತಿವಾದಿ 4 ಮತ್ತು 5 ರವರು ಬಿ ಕೆ ಹಳ್ಳಿಯಲ್ಲಿ ವಾಸವಿದ್ದರು, ಹೋಗಿ ಬಂದು ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 5 ರವರು ಒಟ್ಟಾಗಿ ಹೊಲ ಮನೆಗಳನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ರವರು ಬಿ ಕೆ ಹಳ್ಳಿಯಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿ ನಮ್ಮ ಅಜ್ಜಿಯ ಮನೆಯಲ್ಲಿ ಇರುತ್ತಿದ್ದರು ಎಂದರೆ ಸರಿ.ಆ ಮನೆಯ ಸಂಖ್ಯೆ ನನಗೆ ನೆನಪಿಲ್ಲ. ಆ ಮನೆ ನಿಮ್ಮ ಅಜ್ಜಿಗೆ ಸೇರಿದ್ದು ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇವೆ ಎನ್ನುತ್ತಾರೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ರವರ ಹೆಸರಿನಲ್ಲಿ 283 ಸಿ ಮತ್ತು 349 ರ ಮನೆಗಳು ಇದ್ದವು ಎಂದರೆ ಸರಿಯಲ್ಲ, ಸಾಕ್ಷಿ 283 ಸಿ ನನ್ನ ಅಜ್ಜಿಯ ಹೆಸರಿನಲ್ಲಿ ಇದೆ. 349 ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್ ರವರ ಹೆಸರಿನಲ್ಲಿ ಇದೆ ಎನ್ನುತ್ತಾರೆ. 283 ಸಿ ನನ್ನ ಅಜ್ಜಿಯ ಹೆಸರಿನಲ್ಲಿ ಇದೆ ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇವೆ ಎನ್ನುತ್ತಾರೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನ್ನ ಅಜ್ಜಿಯ ಹೆಸರು ಕಮಲಾಬಾಯಿ ದೇವಿಸಿಂಗ್ ರಜಪೂತ.

ಮನೆ ಸಂಖ್ಯೆ 283 ಸಿ ನನ್ನ ಅಜ್ಜಿಯ ಹೆಸರಿನಲ್ಲಿ ಇತ್ತು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ಎರಡೂ ಮನೆಗಳನ್ನು ಸೇರಿಸಿ ಪ್ರತಿವಾದಿ 4 ಮತ್ತು 5 ರವರು ಪಾಲುವಾಟ್ನಿಗಾಗಿ ದಾವೆ ಹೂಡಿದ್ದರು, ಅದು ಡಿಕ್ರಿ ಆಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ಮತ್ತು ನಿಮಗೂ ಯಾವುದೇ ಸಂಬಂಧ ಇಲ್ಲ  ಎಂದರೆ ಸರಿಯಲ್ಲ. ದಾವಾ ಜಮೀನು  ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್  ರವರ ಹೆಸರಿಗೆ ಮಂಜೂರಾಗಿದೆ  ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.  ದಾವಾ ಜಮೀನು  ನಾರಾಯಣಸಿಂಗ್ ಕೃಷ್ಣಸಿಂಗ್ ರಜಪೂತ್  ರವರ ಹೆಸರಿಗೆ ಮಂಜೂರಾಗಿದೆ  ಎಂದು ಗೊತ್ತಿದ್ದರು ಸಹ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.